# ಪನ್ಚ್ಟನ್ಮೃತ್ರ ಸಂಧಿ

ಹರಿಕಥಾಮ್ರಿತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು

ಭೂ ಸಲಿಲ ಶಿಖಿ ಪವನ ಭೂತಾ
ಕಾಶದೊಳಗೈದೈದು ತನ್ಮಾ
ತ್ರಾ ಸಹಿತ ಒಂದಧಿಕ ಪಂಚಶದ್ವರ್ಣ ವೇದ್ಯ
ಈ ಶರೀರದಿ ವ್ಯಾಪಿಸಿದ್ದು ಸು
ರಾಸುರರಿಗೆ ನಿರಂತರದಲಿ ಸು
ಖಾಸುಖಪ್ರದನಾಗಿ ಆಡುವ ದ್ವೇಶಿಪರ ಬಡಿವ ೭-೧

ಪ್ರಣವಪ್ರತಿಪಾದ್ಯ ತ್ರಿನಾಮದಿ
ತನುವಿನೊಳು ತ್ರಿಸ್ಥಾನಗನಿರು
ದ್ಧನು ತ್ರಿಪಂಚಕ ಏಕವಿಂಶತಿ ಚತುರವಿಂಶತಿಗ
ಎನಿಸಿ ಎಪ್ಪತ್ತೆರಡು ಸಾವಿರ
ಇನಿತು ನಾಡಿಗಳೊಳು ನಿಯಾಮಿಸು
ತನಗಭಸ್ತಿಗ ಲೋಕದೊಳು ಸವತ್ರ ಬೆಳಗುವನು ೭-೨

ಜೀವ ಲಿಂಗಾನಿರುದ್ಧ ಸ್ಥೂಲ ಕ
ಳೇವರಗಳಲಿ ವಿಶ್ವ ತುರಗ
ಗ್ರೀವ ಮೂಲೇಶಾಚ್ಯುತತ್ರಯ ಹಂಸ ಮುತಿಗಳಾ
ಈ ವಿಧ ಚತುಃ ಸ್ಥಾನದಲಿ ಶಂ
ತೀ ವರನ ಈರೇರಡು ರೂಪದಿ
ಭಾವಿಸುವುದೇಕೋನವಿಂಶತಿ ಮೂತಿ ಸವತ್ರ ೭-೩

ಕಲುಷವಿಲ್ಲದ ದಪಣದಿ ಪ್ರತಿ
ಫಲಿಸಿ ಸವ ಪದಾಥಗಳು ಕಂ
ಗೊಳಿಸುವಂದದಿ ಬಿಂಬ ಜಡ ಚೇತನಗಳೊಳಗಿದ್ದು
ಪೊಳೆವ ಬಹುರೂಪದಲಿ ಸಜ್ಜನ
ರೊಳಗೆ ಮನದಪಣದಿ ತಾನಿ
ಶ್ಚಲ ನಿರಾಮಯ ನಿವಿಕಾರ ನಿರಾಶ್ರಯಾನಂತ ೭-೪

ಈ ಶರೀರ ಚತುಷ್ಟಯಗಳೊಳು
ಕೋಶ ಧಾತುಗ  ಭಾರತೀಪತಿ ಪ್ರಾ
ಣೇಶನಿಪ್ಪತ್ತೊಂದು ಸಾವಿರದಾರುನೂರೆನಿಪ
ಶ್ವಾಸ ರೂಪಕ ಹಂಸ ಭಾಸ್ಕರ
ಭೇಶರೊಳಗಿದ್ದವರ ಕೈವಿಡಿ
ದೀಸರೋಜ ಭವಾಂಡದೊಳು ಸವತ್ರ ತುಂಬಿಹನು ೭-೫

ಶಿರಗಿಳ್ಳೆದ್ಯೆದೆರಡು ಬಾಹುಗ
ಳೆರಡು ಪಾದಗಳೊಂದು ಮಧ್ಯೋ
ದರದಿ ಶೋಭಿಪ ವಾಙ್ಮನೋಮಯನೆನಿಪ ನಿತ್ಯದಲಿ
ಕರಣ ಧಾತುಗಳಲ್ಲಿ ಎಪ್ಪ
ತ್ತೆರದು ಸಾವಿರ ನಾಡಿಗಳಲಿ
ಪ್ಪರವಿದೂರನು ಭಾರತ ಪ್ರತಿಪಾದ್ಯನೆಂದೆನಿಸಿ ೭-೬

ಈರೆರದು ದೇಹೋಮಿಭೂತ ಗ
ಳಾರಧಿಕ ದಶ ಇಗ್ವಿನುತ ಲ
ಮೀರಮಣ ವಿಷ್ಣಾಖ್ಯರುಪದಿ ಚತುಷಷ್ಟಿಕಲಾ
ಧಾರಕನು ತಾನಾಗಿ ಬ್ರಹ್ಮ ಪು
ರಾರಿ ಮುಖ್ಯರೊಳಿದ್ದು ಸತತ ವಿ
ಹಾರ ಮಾಳ್ಪನು ಚತುಷ್ಪಾದಾವ್ಹಯದಿ ಲೋಕದೊಳು ೭-೭

ತ್ಇಣ ಮೊದಲು ಬ್ರಹ್ಮಂತ ಜೀವರ
ತನು ಚತುಷ್ಟಯಗಳಲಿ ನಾರಾ
ಯಣನ ಸಾವಿರದ್ಯೆದು ನೂರಿಪ್ಪತ್ತು ಮೇಲಾರು
ಗಣನೆ ಮಾಳ್ಪುದು ಬುಧರು ರೂಪವ
ಘ್ಇಣಿಃ ಸೂಯಾದಿತ್ಯ ನಾಮಗ

ಳನುದಿನದಿ ಜಪಿಸುವರಿಗೀವಾರೋಗ್ಯ ಸಂಪದವ ೭-೮

ಐದು ನೂರೆಪ್ಪತ್ತ ನಾಲಕು
ಆಧಿ ಭೌತಿಕದಲಿ ತಿಳಿವುದು
ಆಇದೆರಡುಶತ ಏಕವಿಂಶತಿ ರೂಪವಧ್ಯಾತ್ಮ
ಭೇದಗಳಲಿನ್ನೂರು ಮೂವ
ತ್ತಾದ ಮೇಲೊಂದಧಿಕ ಮೂತಿಗ
ಳಾದರದಲಧಿ ದೈವದೊಳು ಚಿಂತಿಪುದು ಭೂಸುರರು ೭-೯

ಸುರುಚಿ ಶಾವರೀಕರನೆನಿಸಿ ಸಂ
ಕರುಷಣ ಪ್ರದ್ಯುಮ್ನ ಶಶಿ ಭಾ
ಸ್ಕರರೊಳಗೆ ಅರವತ್ತಧಿಕ ಮುನ್ನೂರು ರೂಪದಲಿ
ಕರೆಸಿಕೊಂಬನು ಅಹಸ್ಸಂವ
ತ್ಸರನೆನಿಪನು ವಿಶಿಷ್ಟ ನಾಮದ
ಲರಿತವರಿಗಾರೋಗ್ಯಭಾಗ್ಯವನೀವಾನಂದಮಯ ೭-೧೦

ಏಕ ಪಂಚಾಶದ್ವರ್ಣಗತ
ಮಾಕಳತ್ರನು ಸವರೊಳಗ
ವ್ಯಾಕ್ಇತಾಕಾಶಾಂತ ವ್ಯಾಪಿಸಿ ನಿಗಮತತಿಗಳನು
ವ್ಯಾಕರಣ ಭಾರತ ಮುಖಾದ್ಯ

ನೇಕ ಶಾಸ್ತ್ರ ಪುರಾಣ ಭಾಷ್ಯಾ
ನೀಕಗಳ ಕಲ್ಪಿಸಿ ಮನೋವಾಣ್ಕ್ಮ್ಯಯನೆನಿಸಿಕೊಂಬ ೭-೧೧

ಭಾರಭ್ಇನ್ನಾಮಕ ಸಾವಿರ
ದಾರು ನೂರಿಪ್ಪತ್ತು ನಾಲುಕು
ಮೂರುತಿಗಳು ಚಾರಾಚರದಿ ಸವತ್ರ ತುಂಬಿಹವು
ಆರು ನಾಲ್ಕು ಜಡಗಳಲಿ ಹದಿ
ನಾರು ಚೇತನಗಳಲಿ ಚಿಂತಿಸೆ
ತೋರಿಕೊಂಬನು ತನ್ನ ರೂಪವ ಸಕಲ ಠಾವಿನಲಿ ೭-೧೨

ಮಿಸುನಿ ಮೇಲಿನ ಮಣಿಯವೋಲ್ ರಾ
ಜಿಸುವ ಬ್ರಹ್ಮಾದಿಗಳ ಮನದಲಿ
ಬಿಸಜಜಾಂಡಾಧಾರಕನು ಆಧೇಯನೆಂದೆನಿಸಿ
ದ್ವಿಶತ ನಾಲ್ವತ್ತೆರಡು ರೂಪದಿ
ಶಶಿಯೊಳಿಪ್ಪನು ಶಶದೊಳಗೆ ಶೋ
ಭಿಸುವ ನಾಲ್ವತ್ತೆರಡಧಿಕ ಶತರೂಪದಲಿ ಬಿಡದೆ ೭-೧೩

ಏರಡು ಸಾವಿರದೆಂತು ರೂಪವ
ನರಿತು ಸವ ಪದಾಥದಲಿ ಸಿರಿ
ವರನ ಪೂಜೆಯ ಮಾಡು ವರಗಲ ಬೇಡು ಕೊಂಡಾಡು

ಬರಿದೆ ಜಲದಲಿ ಮುಣುಗಿ ಬಿಸಿಳೊಳು
ಬೆರಳನೆಣಿಸಿದರೇನು ಸದ್ಗುರು
ಹಿರಿಯರನನುಸರಿಸಿದ ಮಮವನರಿಯದಿಹ ನರನು ೭-೧೪

ಮತ್ತೆ ಚಿದ್ದೇಹದ ಒಳಗೆ ಎಂ
ಭತ್ತು ಸಾವಿರದೇಳು ನೂರಿ
ಪ್ಪತ್ತ ಐದು ನ್ಇಸಿಂಹ ರೂಪದಲ್ಲಿದ್ದು ಜೀವರಿಗೆ
ನಿತ್ಯದಲಿ ಹಗಲಿರುಳು ಬಪ್ಪಪ
ಮ್ಇತ್ಯುವಿಗೆ ತಾ ಮ್ಇತ್ಯುವೆನಿಸುವ
ಭ್ಇತ್ಯುವತ್ಸಲ ಭಯ ವಿನಾಶನ ಭಾಗ್ಯ ಸಂಪನ್ನ ೭-೧೫

ಜ್ವರನೊಳಿಪ್ಪತ್ತೇಳು ಹರನೊಳ
ಗಿರುವನಿಪ್ಪತ್ತೆಂಟು ರೂಪದಿ
ಎರಡು ಸಾವಿರದೆಂಟು ನೂರಿಪ್ಪತ್ತರೇಳೆನಿಪ
ಜ್ವರಹರಾವ್ಹಯ ನಾರಸಿಂಹನ
ಸ್ಮರಣೆ ಮಾತ್ರದಿ ದುರಿತರಾಶಿಗ
ಳಿರದೆ ಪೋಪವು ತರಣಿ ಬಿಂಬವ ಕಂಡ ಹಿಮದಂತೆ ೭-೧೬

ಮಾಸ ಪರಿಯಂತರವು ಬಿಡದೆ ನ್ಇ
ಕೇಸರಿಯ ಶುಭನಾಮ ಮಂತ್ರ ಜಿ

ತಾಸನದಲೇಕಾಗ್ರ ಚಿತ್ತದಿ ನಿಷ್ಕಪಟದಿಂದ
ಬೇಸರದೆ ಜಪಿಸಲು ವ್ಇಜಿನಗಳ
ನಾಶಗೈಸಿ ಮನೋರಥಗಳ ಪ
ರೇಶ ಪೂತಿಯ ಮಾಡಿಕೊಡುವನು ಕಡೆಗೆ ಪರಗತಿಯ ೭-೧೭

ಚತುರಮೂತ್ಯಾತ್ಮಕ ಹರಿಯು ತ್ರಿಂ
ಶತಿ ಸ್ವರೂಪದಿ ಬ್ರಹ್ಮನೊಳು ಮಾ
ರುತನೊಳಿಪ್ಪತ್ತೇಳು ರೂಪದೊಳಿಪ್ಪ ಪ್ರದ್ಯುಮ್ನ
ಸುತರೊಳಿಪ್ಪತ್ತೈದು ಹದಿನೆಂ
ಟತುಳ ರೂಪಗಳಾರಿತು ವತ್ಸರ
ಶತಗಳಲಿ ಪುಜಿಸುತಲಿರು ಚತುರಾತ್ಮಕನ ಪದವ ೭-೧೮

ನೂರು ವರುಷಕೆ ದಿವಸ ಮೂವ
ತ್ತಾರ ಸಾವಿರವಹವು ನಾಡಿ ಶ
ರೀರದೊಳಗಿನಿತಿಹವು ಸ್ತ್ರೀಪುಂ ಭೇದದಲಿ ಹರಿಯ
ಈರಧಿಕ ಎಪ್ಪತ್ತು ಸಾವಿರ
ಮೂರುತಿಗಳನೆ ನೆನೆದು ಸವಾ
ಧಾರಕನ ಸವತ್ರ ಪೂಜಿಸು ಪೂಣನೆಂದರಿದು ೭-೧೯

ಕಾಲ ಕಮ ಗುಣ ಸ್ವಭಾವಗ

ಳಾಲಯನು ತಾನಾಗಿ ಲಕುಮೀ
ಲೋಲ ತತ್ತದ್ರೂಪನಾಮದಿ ಕರೆಸುತೊಳಗಿದ್ದು
ಲೀಲೆಯಿಂದಲಿ ಸವ ಜೀವರ
ಪಾಲಿಸುವ ಸಂಹರಿಸಿ ಸ್ಇಷ್ಟಿಪ
ಮೂಲಕಾರಣ ಪ್ರಕ್ಇತಿ ಗುಣಕಾಯಗಳ ಮನೆಮಾಡಿ ೭-೨೦

ತಿಲಜವತಿಗಳನುಸರಿಸಿ ಪ್ರ
ಜ್ವಲಿಸಿ ದೀಪಗಳಾಲಯದ ಕ
ತ್ತಲೆಯ ಭಂಗಿಸಿ ತತ್ಗತಾಥವ ತೋರುವಂದದಲಿ
ಜಲರುಹೇಅಣ ತನ್ನವರ ಮನ
ದೊಳಗೆ ಭಕ್ತಿ ಜ್~ನಾನ ಕಮಕೆ
ಒಲಿದು ಪೊಳೆವುತ ತೋರುವನು ಗುಣ ರೂಪಕ್ರಿಯಗಳನು ೭-೨೧

ಆವ ದೇಹವ ಕೊಡಲಿ ಹರಿ ಮ
ತ್ತಾವ ಲೋಕದಳಿಡಲಿ ತಾ ಮ
ತ್ತಾವ ದೇಶದೊಳಿಡಲಿ ಆವಾವ ಸ್ಥಿತಿಗಳು ಬರಲಿ
ಈ ವಿಧದಿ ಜಡ ಚೇತನರೊಳು ಪ
ರಾವರೇಶನ ರೂಪಗುಣಗಳ
ಭಾವಿಸುತ ಸುಜ್ಜ್~ನಾನ ಭಕುತಿಯ ಬೇದು ಕೊಂಡಾಡು ೭-೨೨

ಒಂದರೊಳಗೊಂದೊಂದು ಬೆರೆದಿಹ
ಇಂದಿರೇಶನ ರೂಪಗಳ ಮನ
ಬಂದ ತೆರದಲಿ ಚಿಂತಿಸಿದಕನುಮಾನವಿನಿತಿಲ್ಲ
ಸಿಂಧುರಾಜನೊಳಂಬರಾಲಯ
ಬಂಧಿಸಲು ಪ್ರತಿ ತಂತುಗಳೊಳುದ
ಬಿಂದು ವ್ಯಾಪಿಸಿದಂತೆ ಇರುತಿಪ್ಪನು ಚರಾಚರದಿ ೭-೧೩

ಒಂದು ರೂಪದೊಳೊಂದವಯದೊ
ಳೊಂದು ರೋಮದೊಳೊಂದು ದೇಶದಿ
ಪೊಂದಿ ಇಪ್ಪಬುಜಾಂಡನಂತಾನಂತ ಕೋಟಿಗಳು
ಹಿಂದೆ ಮಾಕಾಂಡೇಯ ಕಾಣನೆ
ಒಂದು ರೂಪದಿ ಸ್ಇಷ್ಟಿ ಪ್ರಳಯವ
ಇಂದಿರೇಶನೊಳೇನಿದಚ್ಚರಿ ಅಪ್ರಮೇಯ ಸದಾ ೭-೧೪

ಒಂದನಂತಾನಂತ ರೂಪಗ
ಳೊಂದೆ ರೂಪದೊಳಿಹವು ಲೋಕಗೊ
ಳೋಂದೆ ರೂಪದಿ ಸ್ಇಷ್ಟಿ ಸ್ಥಿತಿ ಮೊದಲಾದ ವ್ಯಾಪಾರ
ಒಂದೆ ಕಾಲದಿ ಮಾಡಿ ತಿಳಿಸದೆ
ಸಂದಣಿಸಿಕೊಂದಿಪ್ಪ ಜಗದೊಳು
ನಂದನಂದನ ರಣದೊಳಿಂದ್ರಾತ್ಮಜಗೆ ತೋರಿಸನೆ ೭-೧೫

ಶ್ರೀರಮೇಶನ ಮೂತಿಗಳು ನವ
ನಾರಿಕುಂಜರದಂತೆ ಏಕಾ
ಕಾರ ತೋಪವು ಅವಯವಾವ್ಹಯ ಅವಯವಗಳಲಿ
ಬೇರೆ ಬೇರೆ ಕಂಗೊಳಿಸುವ ಶ
ರೀರದೊಳು ನಾನಾ ಪ್ರಕಾರ ವಿ
ಕಾರಶೂನ್ಯ ವಿರಾಟನೇನಿಸುವ ಪದುಮಜಾಂಡದೊಳು ೭-೧೬

ವಾರಿಜಭವಾಂಡದೊಳು ಲಕುಮಿ
ನಾರಸಿಂಹನ ರೂಪಗುಣಗಳು
ವಾರಿಧಿಯೊಳಿಹ ತೆರೆಗಳಂದದಿ ಸಂದಣಿಸಿ ಇಹವು
ಕಾರಣಾಂಶಾವೇಶ ವ್ಯಾಪ್ತವ
ತಾರ ಕಾಯ ವ್ಯಕ್ತವ್ಯಕ್ತವು
ಆರುನಾಲ್ಕು ವಿಭೂತಿಯಂತಯಾಮಿ ರೂಪಗಳು ೭-೧೭

ಮಣಿಗಳೊಳಗಿಹ ಸೂತ್ರದಂದದಿ
ಪ್ರಣವಪಾದ್ಯನು ಚೇತನಾಚೇ
ತನ ಜಗತ್ತಿನೊಳನುದಿನದೊಳಾಡುವನು ಸುಖಪೂಣ
ದಣುವಿಕೆಯು ಇವಗಿಲ್ಲ ಬಹುಕಾ
ರುಣಿಕನಂತಾನಂತ ಜೀವರ

ಗಣದೊಳೇಕಾಂಶಾ ರೂಪದಿ ನಿಂತು ನೇಮಿಸುವ ೭-೧೮

ಜೀವಜೀವರಭೇದ ಜಡ ಜಡ
ಜೀವಜಡ ಜಡಜೀವರಿಂದಲಿ
ಶ್ರೀವರನು ಅತ್ಯಂತ ಭಿನ್ನ ವಿಲಅಣನು ಲಕ್ಷ್ಮೀ
ಮೂವರಿಂದಲಿ ಪದುಮಜಾಂಡದಿ
ತಾ ವಿಲಅಣಳೆನಿಸುತಿಪ್ಪಳು
ಸಾವಧಿಕ ಸಮಶೂನ್ಯಳೆಂದರಿತೀವರನು ಭಜಿಸು ೭-೧೯

ಆದಿತೇಯರು ತಿಳಿಯದಿಹ ಗುಣ
ವೇದಮಾನಿಗಳೆಂದೆನಿಪ ವಾ
ಣ್ಯದಿಗಳು ಬಲ್ಲರವರರಿಯದ ಗುಣಗಣಂಗಳನು
ವೇಧಬಲ್ಲನು ಬೊಮ್ಮನರಿಯದ
ಗಾಧಗುಣಗಳು ಲಕುಮಿ ಬಲ್ಲಳು
ಶ್ರೀಧರೊಬ್ಬನುಪಾಸ್ಯ ಸದ್ಗುಣಪೂಣ ಹರಿಯೆಂದು ೭-೨೦

ಇಂತನಂತಾನಂತ ಗುಣಗಳ
ಪ್ರಾಂತಗಾಣದೆ ಮಹಾಲಕುಮಿ ಭಗ
ವಂತಗಾಭರಣಾಯುಧಾಂಬರವಾಲಯಗಳಾಗಿ
ಸ್ವಾಂತದಲಿ ನೆಲೆಗೊಳಿಸಿ ಪರಮ ದು

ರಂತ ಮಹಿಮನ ದೌತ್ಯ ಕಮ ನಿ
ರಂತರದಿ ಮಾಡುತಲಿ ತದಧೀನತ್ವವೈದಿಹಳು ೭-೩೧

ಪ್ರಳಯ ಜಲಧಿಯೊಳುಳ್ಳ ನಾವೆಯು
ಹೊಲಬುಗಾಣದೆ ಸುತ್ತುವಂದದಿ
ಜಲರುಹೇಅಣನಮಲ ಗುಣರೂಪಗಳ ಚಿಂತಿಸುತ
ನೆಲೆಯ ಗಾಣದೆ ಮಹಲಕುಮಿ ಚಂ
ಚಲವನೈದಿಹಳಲ್ಪ ಜೀವರಿ
ಗಳವಡುವುದೇನಿವನ ಮಹಿಮೆಗಳೀ ಜಗತ್ರಯದಿ ೭-೩೨

ಶ್ರೀನಿಕೇತನ ಸಾತ್ವತಾಂಪತಿ
ಜ್~ನಾನಗಂಯ ಗಯಾಸುರಾದನ
ಮೌನಿಕುಲಸನ್ಮಾನ್ಯ ಮಾನದ ಮಾತುಳ ಧ್ವಂಸಿ
ದೀನಜನ ಮಂದಾರ ಮಧುರಿಪು
ಪ್ರಾಣದ ಜಗನ್ನಾಥ ವಿಟ್ಠಲ
ತಾನೆ ಗತಿಯೆಂದನುದಿನದಿ ನಂಬಿದವರನು ಪೊರೆವ ೭-೩೩